ಗಡಗಡ ಅಲುಗಾಡಿ, ಟ್ಯಾಂಕಿಗೆ ಬಡಿದು ಅಲಾರ್ಮ್ ಹೊಡೆದು ನನ್ನ ನಿದ್ದೆಗೆ ಪೈಪ್ ಬಾಂಬ್ ಇಡುತ್ತವೆ. ಬೆಂಗಳೂರಿನಲ್ಲಿ ಕೋಳಿ ಅಂಗಡಿಗಳೂ ನಾನ್‌ವೆಜ್ ಹೊಟೆಲ್‌ಗಳೂ ರಾತ್ರಿ ತಮ್ಮ ತ್ಯಾಜ್ಯಗಳನ್ನು ಅಲ್ಲಲ್ಲಿ ಬಿಸಾಕಿ ಹೋಗುವುದರಿಂದ ಗಿಡುಗಗಳು ಇಲ್ಲದ ಬಡಾವಣೆಯೇ ಈ ನಗರದಲ್ಲಿ ಇಲ್ಲವೇನೊ. ಆದರೆ, ವಿಮಾನ ನಿಲ್ದಾಣದ ಸುತ್ತ ಅವುಗಳ ಕಾಟ ಇಲ್ಲವೆಂದು ಕೇಳಿದ್ದೇನೆ. ಏಕೆಂದರೆ, ಅವು ಎತ್ತರದ ಆಕಾಶದಲ್ಲಿ ಹಾರತೊಡಗಿದರೆ ವಿಮಾನಗಳ ರೆಕ್ಕೆಗೆ ಇವುಗಳ ರೆಕ್ಕೆ ತಾಗಿ ದೊಡ್ಡ ದುರಂತವೇ ಸಂಭವಿಸಿದ್ದಿದೆ. ಹಾಗೇನೂ ಆಗಬಾರದೆಂದು ವಿಮಾನ ನಿಲ್ದಾಣಗಳ ಉಸ್ತುವಾರಿ ಅಧಿಕಾರಿಗಳು ಈ ಪಕ್ಷಿಗಳ ಮೇಲೆ ಹದ್ದಿನ ಕಣ್ಣು ಇಟ್ಟಿರುತ್ತಾರೆ. ಮಾಂಸದ ಅಂಗಡಿಗಳು ಸುತ್ತ ಎಲ್ಲೂ ತಲೆ ಎತ್ತುವಂತಿಲ್ಲ.

